ಶ್ರೀ ಎಸ್. ಎಸ್. ಆರಕೇರಿ.—ನಿಯಮಾವಳಿ ಪ್ರಕಾರ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳನ್ನು ಭರ್ತಿ ಮಾಡಿದ್ದೀರಿ ? ಬಹಳ ಸಂತೋಷ. ಇವರಲ್ಲಿ ಎಷ್ಟು ಜನ ಹರಿಜನರು ಇದ್ದಾರೆ ? ಅಲ್ಲದೆ, ೯-೧೦ ವರ್ಷಗಳ ಕಾಲ ಸೇವೆ ಮಾಡಿರುವಂಥ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳನ್ನು ಮರು ನೇಮಕ ಮಾಡದೇ ಹೋದರೆ ಬಹಳ ಅನ್ಯಾಯವಾಗುತ್ತದೆ ; ಆದುದರಿಂದ ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ನಿಮ್ಮ ವರ್ಗದವರಿಗೆ ಹುದ್ದೆಗಳನ್ನು ಕೊಡುವ ವಿಚಾರದಲ್ಲಿ ಸ್ಪಷ್ಟವಾದ ಕಾನೂನು ಇದೆ. ಕಾನೂನು ಪ್ರಕಾರ ಹುದ್ದೆಗಳನ್ನು ತುಂಬಿಲ್ಲ ಎಂದು ತಾವು ಹೇಳುವುದಾದರೆ ಅದನ್ನು ತನಿಖೆ ಮಾಡಿ ವಿಚಾರ ಮಾಡಿಸುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ನನಗೆ ತಿಳಿದಿರುವ ಹಾಗೆ ಪರಿಜನ ಗಿರಿಜನರಿಗೆ ಕೊಡಬೇಕಾಗಿದ್ದ ೧೮ ಪರ್ಸೆಂಟ್ ಕೋಟಾವನ್ನು ಕೊಟ್ಟಿಲ್ಲ ; ಶಿಫಾರಸ್ಸುಗಳ ಮೇಲೆ ತುಂಬಿದ್ದಾರೆ. ಹರಿಜನ ಗಿರಿಜನರಿಗೆ ಸಿಗಬೇಕಾದ ಸ್ಥಾನಗಳನ್ನು ತುಂಬುವ ಬಗ್ಗೆ ಯಾವ ಪ್ರಯತ್ನ ಮಾಡುತ್ತೀರಿ ? ಕರ್ತವ್ಯ ಲೋಪ ಮಾಡಿರುವ ತಕ್ಕ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸದಸ್ಯರು ಏನು ಆತಂಕ ವ್ಯಕ್ತಪಡಿಸಿದ್ದಾರೆ ; ಅದಕ್ಕೆ ನಾನೂ ಕೂಡ ಭಾಗಿಯಾಗಿದ್ದೇನೆ. ೧೮ ಪರ್ಸೆಂಟ್ ಸ್ಥಾನಗಳನ್ನು ಹರಿಜನ ಗಿರಿಜನರಿಗೆ ನಾವು ವಿಧಿವತ್ತಾಗಿ ಜಾರಿಯಲ್ಲಿ ಕೊಡುತ್ತಿದ್ದೇವೆ. ಈ ವಿಷಯದಲ್ಲಿ ಅಂಕಿಅಂಶಗಳನ್ನು ತರಿಸಿ, ಕಡಿಮೆ ಇದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಬೆಳಗಾವಿ ವಿಭಾಗಾಧಿಕಾರಿಯವರು ೧೨೦೦ ಜನ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳನ್ನು ಹಿಂದಿನ ತಾರೀಖಿನಿಂದಲೇ ಅವರ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಮುಂದುವರಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಿದ್ದಾರೆ. ತಾವು ತಮ್ಮ ಉತ್ತರದಲ್ಲಿ ಮೂರು ಮಂದಿಗೆ ಎಂದು ಹೇಳಿದ್ದೀರಿ ; ಇದು ಪಸ್ತುಸ್ಥಿತಿ ಅಲ್ಲ. ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳು ಹಿಂದೆ ಮಾಡಿದ ಸೇವೆಯನ್ನು ಎಲ್ಲರ ದೃಷ್ಟಿಯಿಂದ ಪರಿಗಣನೆಗೆ ತೆಗೆದುಕೊಂಡು ಈ ವಿಚಾರವನ್ನು ಮರು ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ತಾವು ವಿಚಾರವನ್ನು ಈಗ ಸ್ಪಷ್ಟಪಡಿಸಿದ್ದೀರಿ ; ನಮ್ಮ ಮುಂದೆ ಶಿಫಾರಸ್ಸು ಬಂದಿಲ್ಲ ; ಬಂದಾಗ ನೋಡುತ್ತೇನೆ.

Acquisition of land for III Stage Banashankari Scheme

211. SRI M. CHANDRASEKHAR (Jayanagar).— Will the Chief Minister be pleased to state :—

(a) whether the Bangalore Development Authority has not taken action to acquire the lands bearing S.No. 7 of Gerehalli village Uttarahalli Hobli. Bangalore South Taluk along with other lands *vide* its Notification No. 42/SLAO/54/75-76 dated 22nd July 1975 to form Banashankari III Stage Layout.

(b) if so; the reasons for leaving out this S.No. from acquisition proceedings ;

(c) whether the Government intends to direct the Bangalore Development Authority to acquire the land in S.No. 7 of Gerehalli and include in the Banashankari III Stage Scheme and regularise the revenue sites formed in S.No. 7 and purchased by the private people ?

SRI K.H. RANGANATH, (Minister for Agriculture and Parliamentary Affairs) [On behalf of Sri D. DEVARAJ URS. (Chief Minister)].—

(a) Action is taken to acquire the land.

(b) Does not arise in view of (a)

(c) It is for the Bangalore Development Authority to decide whether to regularise the revenue sites formed in S.No. 7 of Gerehally which were purchased by private persons.

ಶ್ರೀ ಎಂ. ಚಂದ್ರಶೇಖರ್.—ಉತ್ತರಹಳ್ಳಿ ಪ್ರದೇಶದ ಸುತ್ತಮುತ್ತ ಇರತಕ್ಕ ಅನೇಕ ಹಳ್ಳಿಗಳಲ್ಲಿ ಅದರಲ್ಲಿ ಗೇರಹಳ್ಳಿಯಲ್ಲಿ ಇರತಕ್ಕ ರೆವಿನ್ಯೂ ಸೈಟುಗಳಲ್ಲಿ ಕೆಲವು ಜನ ಈಗಾಗಲೇ ಸೈಟುಗಳನ್ನು ಕೊಂಡು ಮನೆಗಳನ್ನು ಕಟ್ಟಿದ್ದಾರೆ. ೧೯೭೫ ರಲ್ಲಿ ಒಂದು ರೆವಿನ್ಯೂ ಸೈಟ್ಸ್ ಓನರ್ಸ್ ವೀಕ್‌ನಲ್ಲಿ ರೀಕನ್ವೆ ಮಾಡಬೇಕೆಂದು ಬೆಂಗಳೂರು ಪ್ರಾಧಿಕಾರವನ್ನು ಒತ್ತಾಯ ಮಾಡಲಿಲ್ಲವೆ ?

† ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಕಾನೂನು ಪ್ರಕಾರ ಯಾವುದಾದರೂ ಅಕ್ವಿಜಿಷನ್ ವಿಚಾರದಲ್ಲಿ ಪ್ರಿಲಿಮಿನರಿ ನೋಟಿಫಿಕೇಷನ್ ಹಾಗೂ ಫೈನಲ್ ನೋಟಿಫಿಕೇಷನ್ ಬಂದಮೇಲೆ ಯಾವುದಾದರೂ ಆಸ್ತಿಯನ್ನು ಪರಭಾರೆ ಮಾಡಿದರೆ ಅದು ಸಿಂಧು ಆಗುವುದಿಲ್ಲ. ಆದಾಗ್ಯೂ ಕೂಡ ಇದಾದ ಮೇಲೆ ಸುಮಾರು ೧೨ ಗುಂಟೆ ಪ್ರದೇಶದಲ್ಲಿ ಕೆಲವು ಮನೆಗಳನ್ನು ಕಟ್ಟಿ ವ್ಯಾರಾಟ ಮಾಡಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಕೊಡತಕ್ಕ ಅಧಿಕಾರ ಬಿ.ಡಿ.ಎ. ವಾಪ್ತಿಗೆ ಸೇರಿದ್ದು, ಬಹಳ ವ್ಯಾಟ್ಟಿಗೆ ಇದು ಸರ್ಕಾರದ ಕಡೆ ಬರುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಖಾಸಗೀ ಬಡಾವಣೆಗಳಲ್ಲಿ ಸರಿಯಾದ ರಸ್ತೆಗಳಾಗಲೀ, ಶಾಲೆಗಳಾಗಲೀ, ಆಟದ ಮೈದಾನಗಳಾಗಲೀ ಇರುವುದಿಲ್ಲ. ಈ ವಿಚಾರದಲ್ಲಿ ಬಿ.ಡಿ.ಎ. ನವರು ಕ್ರಮ ತೆಗೆದುಕೊಂಡು ರೀ ಕನ್ವೆ ಮಾಡಿ ಅನುಕೂಲ ಮಾಡಿಕೊಡಬಹುದು. ಕೊಂಡುಕೊಂಡಿರತಕ್ಕ ಜಾಗ ಗಳಲ್ಲಿ ಈ ರೀತಿ ಮಾಡಿದರೆ ಬಡಾವಣೆ ಬೆಳವಣಿಗೆಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಕೆ. ಹೆಚ್. ರಂಗನಾಥ್.—ನಾನು ಕೊಡಬೇಕು ರೀ ನ್ವೆ ಮಾಡಬೇಕೂಂತ ನಾನು ಹೇಳಲಿಲ್ಲ. ಅಕ್ವಿ ಮಾರಾಟ ಮಾಡಿದ್ದೇ ತಪ್ಪು, ಮಾರಾಟ ಮಾಡಿದವನಿಗೆ ದುಡ್ಡು ಬರುತ್ತೆ. ಇದು ಬಿ.ಡಿ.ಎ. ಅವರ ವ್ಯಾಪ್ತಿಗೆ ಸೇರಿದ್ದು ಎಂದು ಹೇಳಿದ್ದೇನೆ.

ಶ್ರೀ ಎಂ. ಚಂದ್ರಶೇಖರ್:—ಕಳೆದ ೮-೧೦ ವರ್ಷಗಳ ಹಿಂದೆ ಆಗಿರತಕ್ಕವುಗಳ ಬಗ್ಗೆ ಒಂದು ಸೂಕ್ತ ಕ್ರಮ ತೆಗೆದುಕೊಂಡು ಬಿ.ಡಿ.ಎ.ಯಿಂದ ರೀ ಕನ್ವೆ ಮಾಡಿ, ಯೋಜನೆಗೆ ತಕ್ಕಂತೆ, ಅಂದಾಜಿಗೆ ತಕ್ಕಂತೆ ಮನೆಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಈ ವಿಚಾರದಲ್ಲಿ ಬಿ.ಡಿ.ಎ. ಮೇಲೆ ಸರ್ಕಾರ ಒತ್ತಾಯ ತರುತ್ತದೆಯೆ ? ಇಲ್ಲದೇ ಇದ್ದರೆ ದೊಡ್ಡ ಮನುಷ್ಯರು ಇರತಕ್ಕ ಸ್ಲಮ್‌ಗಳು ಆಗುತ್ತವೆ.

ಶ್ರೀ ಕೆ. ಹೆಚ್. ರಂಗನಾಥ್ :—ಅಕ್ವಿಜಿಷನ್‌ಗೆ ಸಂಬಂಧಪಟ್ಟಂತೆ ನೋಟಿಫಿಕೇಷನ್ ಆಗಿರುವಾಗ, ಪರಭಾರೆ ಮಾಡತಕ್ಕದ್ದು ಕಾನೂನು ಬಾಹಿರವಾದುದು. ಈ ಮನೆಯ ಚಿಕ್ಕ ವಯಸ್ಸಿನ ಸದಸ್ಯ ರೊಬ್ಬರು ಬಿ.ಡಿ.ಎ.ನಲ್ಲಿದ್ದಾರೆ, ಇರತಕ್ಕ ತೊಂದರೆಯನ್ನು ಸರಿಪಡಿಸಲಿಕ್ಕೆ ಚಂದ್ರಶೇಖರ್‌ರವರು ಶಿಫಾರಸ್ಸು ಮಾಡಬಹುದು.

ಶ್ರೀ ಟಿ. ಆರ್. ಶಾಮಣ್ಣ:—ಚಂದ್ರಶೇಖರ್‌ರವರು ಪ್ರಶ್ನೆ ಹಾಕಿದ ಸಮಯಕ್ಕೂ ಈಗಿನ ಸಂದರ್ಭಕ್ಕೂ ಬಹಳ ವ್ಯತ್ಯಾಸ ಇದೆ ಸರ್ಕಾರದವರು ಬೆಂಗಳೂರು ಸುತ್ತಮುತ್ತ ೧೪ ಕಿಲೋಮೀಟರ್ ಫಾಸಲೆಯಲ್ಲಿರತಕ್ಕ ಸುಮಾರು ೧೧೦ ಹಳ್ಳಿಗಳನ್ನು ಕಾರ್ಪೊರೇಷನ್ ವ್ಯಾಪ್ತಿಗೆ ಸೇರಿಸಿ ಆಜ್ಞೆ ಹೊರಡಿಸಿದ್ದಾರೆ. ಈ ವಿಚಾರದಲ್ಲಿ ಬಿ.ಡಿ.ಎ. ಜೊತೆ ಸರ್ಕಾರ ವಿಚಾರ ಮಾಡಿ, ಬೆಂಗಳೂರು ನಗರದ ಅಂದ ಚಂದವನ್ನು ಗಮನಕ್ಕೆ ತೆಗೆದುಕೊಂಡು ತೀವ್ರ ಪರಿಶೀಲನೆ ಮಾಡುವುದಕ್ಕೆ ಸಾಧ್ಯವೆ ?

ಶ್ರೀ ಕೆ. ಹೆಚ್. ರಂಗನಾಥ್:—ಸ್ವಾಮಿ, ಪ್ರಶ್ನೆ ಸಂಬಂಧಪಟ್ಟದ್ದು ಗೇರಹಳ್ಳಿ ಸರ್ವೆ ನಂ. ೭ಕ್ಕೆ ಸೇರಿದ್ದು. ಮಾನ್ಯ ಸದಸ್ಯರ ಅಭಿಪ್ರಾಯ ಸರ್ಕಾರದ ಗಮನಕ್ಕೆ ಬಂದಿದೆ.